## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: | 214 |
| ಮಾನ್ಯ ಸದಸ್ಯರ ಹೆಸರು | ಶ್ರೀ.ಅಲ್ಲಂ ವೀರಭದ್ರಪ್ಪ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ: | 13.09.2021 |
| ಉತ್ತರಿಸುವ ಸಚಿವರು | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರದ ಮುಂದೆ 14 ರಿಂದ 18 ವರ್ಷದ ಮಕ್ಕಳಿಗೆ ಕೋವಿಡ್-19 ಲಸಿಕೆ ಹಾಕುವ ಕಾರ್ಯಯೋಜನೆಯ ಪ್ರಸ್ತಾವನೆ ಇದೆಯೇ: | ಭಾರತ ಸರ್ಕಾರ ಕೋವಿಡ್-19 ಲಸಿಕಾಕರಣ ಕುರಿತಂತೆ ರಚಿಸಿರುವ NEGVAC (National Expert Group on Vaccine Administration for Covid-19) ಮಾರ್ಗಸೂಚಿಯನ್ವಯ ಲಸಿಕಾಕರಣ ನಡೆಸಲಾಗುತ್ತಿದ್ದು, ಪ್ರಸ್ತುತ 18 ವರ್ಷ ಮೇಲ್ಪಟ್ಟವರಿಗೆ ಮಾತ್ರ ಲಸಿಕಾಕರಣ ನಡೆಸಲಾಗುತ್ತಿದೆ. |
| ಆ | ರಾಜ್ಯದ ಜನಸಂಖ್ಯೆಯಲ್ಲಿ ಶೇಕಡ 25 ರಷ್ಟು ಮಕ್ಕಳಿದ್ದು, ಶಾಲಾ ಕಾಲೇಜುಗಳಿಗೆ ಹೋಗುವಂತ ಮಕ್ಕಳಲ್ಲಿ ಕೋವಿಡ್-19 ವೈರಸ್ ಹರಡದಿರುವಂತೆ ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು: | ಶಾಲಾ ಕಾಲೇಜುಗಳಿಗೆ ಹೋಗುವಂತಹ ಮಕ್ಕಳಲ್ಲಿ ಕೋವಿಡ್-19 ವೈರಸ್ ಹರಡದಿರುವಂತೆ ಈಗಾಗಲೇ ಶಾಲಾ ಕಾಲೇಜುಗಳ ಭೋದಕ/ಭೋದಕೇತರ ಸಿಬ್ಬಂದಿಗಳಿಗೆ ಹಾಗೂ ವಿದ್ಯಾರ್ಥಿಗಳಿಗೆ ಲಸಿಕಾಕರಣ ನಡೆಸಲಾಗುತ್ತಿದೆ.<br>• ಭೋದಕ/ಭೋದಕೇತರ ಸಿಬ್ಬಂದಿಗಳು ಒಟ್ಟು 419518 ಇದ್ದು, ಇವರಲ್ಲಿ 07-09-2021ಕ್ಕೆ 417448 ಸಿಬ್ಬಂದಿ ಮೊದಲ ಡೋಸ್ ಪಡೆದಿರುತ್ತಾರೆ ಹಾಗೂ 187163 ಸಿಬ್ಬಂದಿ 2ನೇ ಡೋಸ್ ಕೋವಿಡ್ ಲಸಿಕೆ ಪಡೆದಿರುತ್ತಾರೆ.<br>• ಪದವಿಪೂರ್ವ ಶಿಕ್ಷಕರು ಒಟ್ಟು 34545 ಇದ್ದು, ದಿನಾಂಕ: 07-09-2021ಕ್ಕೆ 31995 ಶಿಕ್ಷಕರು ಮೊದಲ ಡೋಸ್ ಹಾಗೂ 16515 ಶಿಕ್ಷಕರು 2ನೇ ಡೋಸ್ ಪಡೆದಿರುತ್ತಾರೆ.<br>• ಇದಲ್ಲದೇ ದಿನಾಂಕ: 25-08-2021ರಂದು ಶಾಲಾ ಭೋದಕ/ಭೋದಕೇತರ ಸಿಬ್ಬಂದಿ ಕುಟುಂಬದವರಿಗೆ ಕೋವಿಡ್-19 ಲಸಿಕಾಕರಣ ನಡೆಸಲು ಸೂಚನೆ ನೀಡಲಾಗಿರುತ್ತದೆ.<br>• ದಿನಾಂಕ: 07-08-2021ರಂದು 9ನೇ ಮತ್ತು 10ನೇ ತರಗತಿ ಶಾಲಾ ಮಕ್ಕಳ ಪೋಷಕರಿಗೆ ಕೋವಿಡ್-19 ಲಸಿಕಾಕರಣ ನಡೆಸಲು ಎಲ್ಲಾ ಜಿಲ್ಲೆಗಳಿಗೆ ಸೂಚನೆ ನೀಡಲಾಗಿರುತ್ತದೆ. |
| ಇ | 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಕೋವಿಡ್-19 ಲಸಿಕೆ ಹಾಕಲು ಸರ್ಕಾರ ಕಾಲಮಿತಿ ನಿಗದಿಪಡಿಸಿಕೊಂಡಿದೆಯೇ: | 18 ವರ್ಷ ಮೇಲ್ಪಟ್ಟ ಒಟ್ಟು 4.97 ಕೋಟಿ ಫಲಾನುಭವಿಗಳಿಗೆ 2 ಡೋಸ್ ಕೋವಿಡ್-19 ಲಸಿಕೆ ನೀಡಬೇಕಾಗಿದ್ದು, ರಾಜ್ಯದಲ್ಲಿ ದಿನಾಂಕ: 08-09-2021ರ ಅಂತ್ಯಕ್ಕೆ 18 ವರ್ಷ ಮೇಲ್ಪಟ್ಟ 3,44,35,476 (69.2%) ಫಲಾನುಭವಿಗಳಿಗೆ ಮೊದಲನೇ ಡೋಸ್ ಹಾಗೂ 11662095 (23.4%) ಫಲಾನುಭವಿಗಳಿಗೆ ಎರಡನೇ ಡೋಸ್ ಕೋವಿಡ್-19 ಲಸಿಕಾಕರಣ ನಡೆಸಲಾಗಿದೆ. ಪ್ರತಿದಿನ ಸರಾಸರಿ 5 ಲಕ್ಷ ಫಲಾನುಭವಿಗಳಿಗೆ ಲಸಿಕೆ ನೀಡುವ ಗುರಿ ಹೊಂದಲಾಗಿದೆ. ಅದರೊಂದಿಗೆ ಪ್ರತಿ ಬುಧವಾರದಂದು ಲಸಿಕಾ ಮೇಳವನ್ನು ನಡೆಸಲಾಗುತ್ತಿದ್ದು, ಆದಷ್ಟು ಶೀಘ್ರವಾಗಿ ರಾಜ್ಯದ 18 ವರ್ಷ ಮೇಲ್ಪಟ್ಟ ಎಲ್ಲರಿಗೂ ಲಸಿಕೆ ನೀಡಲು ಕ್ರಮವಹಿಸಲಾಗುತ್ತಿದೆ. |

| | | |
|---|---|---|
| ಈ | 3ನೇ ಅಲೆಯ ಸಂಭವನೀಯತೆ ಎದುರಿಸಲು ಲಸಿಕಾ ಅಭಿಯಾನ ಯೋಜನೆಯನ್ನು ಕ್ಷಿಪ್ರಗತಿಯಲ್ಲಿ ಕೈಗೊಳ್ಳಲು ಹಾಕಿಕೊಂಡಿರುವ ಕಾರ್ಯಕ್ರಮಗಳೇನು? | ಸಂಭಾವ್ಯ ಮೂರನೇ ಅಲೆಯಿಂದ ಜನರನ್ನು ರಕ್ಷಿಸಲು ಲಸಿಕಾಕರಣವನ್ನು ತೀವ್ರಗೊಳಿಸಲು ಕ್ರಮವಹಿಸಲಾಗಿದೆ.<br>• ರಾಜ್ಯದಲ್ಲಿ ಪ್ರತಿ ದಿನ 5 ರಿಂದ 6 ಲಕ್ಷ ಲಸಿಕಾ ಡೋಸ್ ಗಳನ್ನು ನೀಡುವ ಗುರಿಯನ್ನು ಹೊಂದಿದೆ.<br>• ಪ್ರತಿ ಬುಧವಾರದಂದು ಲಸಿಕಾ ಮೇಳವನ್ನು ನಡೆಸಲಾಗುತ್ತಿದೆ. ಸದರಿ ಮೇಳದಲ್ಲಿ 10 ರಿಂದ 12 ಲಕ್ಷ ಲಸಿಕಾ ಡೋಸ್ ಗಳನ್ನು ಅರ್ಹ ಫಲಾನುಭವಿಗಳಿಗೆ ನೀಡುವ ಗುರಿಯನ್ನು ರಾಜ್ಯವು ಹೊಂದಿದೆ.<br>• ಎರಡನೇ ಡೋಸ್‌ಗೆ ಬಾಕಿಯಿರುವ ಫಲಾನುಭವಿಗಳ ಲಸಿಕಾಕರಣಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ.<br>• ಎರಡನೇ ಡೋಸ್‌ಗೆ ಬಾಕಿಯಿರುವ ಫಲಾನುಭವಿಗಳ ಪಟ್ಟಿಯನ್ನು ಜಿಲ್ಲೆಗಳಿಗೆ ಪ್ರತಿದಿನ ಇ-ಮೇಲ್ ಮೂಲಕ ಕಳುಹಿಸಲಾಗುತ್ತಿದೆ. ಸದರಿ ಪಟ್ಟಿಯಂತೆ ಜಿಲ್ಲೆಗಳಲ್ಲಿ ಫಲಾನುಭವಿಗಳಿಗೆ ದೂರವಾಣಿ ಮುಖಾಂತರ ಕರೆ ಮಾಡಿ ಲಸಿಕೆ ಹಾಕಿಸಿಕೊಳ್ಳಲು ತಿಳಿಸಲಾಗುತ್ತಿದೆ.<br>• ಅರ್ಹ ಫಲಾನುಭವಿಗಳನ್ನು ಸಜ್ಜುಗೊಳಿಸಲು ಪಂಚಾಯಿತಿ ಮಟ್ಟದಲ್ಲಿನ ಗ್ರಾಮ ಪಂಚಾಯಿತಿ ಕಾರ್ಯಪಡೆಯನ್ನು ಬಳಸಿಕೊಳ್ಳಲಾಗುತ್ತಿದೆ.<br>• ರಾಜ್ಯದ ಸರಾಸರಿ ಪ್ರಗತಿಗಿಂತ ಕಡಿಮೆ ಪ್ರಗತಿ ಹೊಂದಿರುವ ಜಿಲ್ಲೆಗಳಿಗೆ ದೈನಂದಿನ ಗುರಿಯನ್ನು ನಿಗದಿಪಡಿಸಲಾಗಿದೆ.<br>• ಕೋವಿಡ್-19 ಪಾಸಿಟಿವಿಟಿ ದರ ಹೆಚ್ಚಿರುವ ಜಿಲ್ಲೆಗಳಿಗೆ ಆದ್ಯತೆ ಮೇರೆಗೆ ಹೆಚ್ಚಿನ ಪ್ರಮಾಣದ ಲಸಿಕೆಗಳನ್ನು ಪೂರೈಸಲಾಗಿದೆ.<br>• ಗಡಿ ಜಿಲ್ಲೆಗಳಿಗೆ ಆದ್ಯತೆ ಮೇರೆಗೆ ಹೆಚ್ಚಿನ ಪ್ರಮಾಣದ ಲಸಿಕೆಗಳನ್ನು ಪೂರೈಸಲಾಗಿದೆ. ಹಾಗೂ ಗಡಿಭಾಗದ 20 ಕಿ.ಮೀ ಪರಿಧಿಯೊಳಗಿನ ಗ್ರಾಮಗಳ ಎಲ್ಲಾ ಅರ್ಹ ಫಲಾನುಭವಿಗಳಿಗೆ ಶೇ.100 ಲಸಿಕಾಕರಣ ಹೊಂದಲು ಕ್ರಮಕೈಗೊಳ್ಳಲಾಗುತ್ತಿದೆ.<br>• ಲಸಿಕೆಗಳ ಸರಬರಾಜು ಪ್ರಮಾಣವನ್ನು ಹೆಚ್ಚಿಸಲು ಭಾರತ ಸರ್ಕಾರವನ್ನು ಕೋರಲಾಗಿದೆ. |

**ಸಂಖ್ಯೆ:ಆಕುಕ 90 ಎಸ್‌ಎಂಎಂ 2021**

**(ಡಾ||ಕೆ.ಸುಧಾಕರ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ**
**ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು**